ಆಕಾಶವಾಣಿ 08.07.2024

ಪ್ರದೇಶ ಸಮಾಚಾರ

ಓದುತ್ತಿರುವವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

- ಕಳಸಾ–ಬಂಡೂರಿ ತಿರುವು ಯೋಜನೆ; ಕೇಂದ್ರದ 'ಪ್ರವಾಹ್' ತಂಡದಿಂದ, ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ, ಪರಿಶೀಲನೆ.
- ಡೆಂಘಿ ಪ್ರಕರಣ ಏರುಗತಿಯಲ್ಲಿ; ಎಲ್ಲ ಗ್ರಾಮ ಪಂಚಾಯ್ತಿಗಳು ಮುನ್ನೆಚ್ಚರಿಕೆ ವಹಿಸಬೇಕು – ಪ್ರಿಯಾಂಕ್ ಖರ್ಗೆ, ಕಟ್ಟುನಿಟ್ಟಿನ ಸೂಚನೆ.
- ಸಂಪೂರ್ಣತಾ ಅಭಿಯಾನ; ರಾಯಚೂರು ಜಿಲ್ಲೆಯ ಮಸ್ಕಿ ಹಾಗೂ ಸಿರಿವಾರ ತಾಲೂಕುಗಳು ಆಯ್ಕೆ.
- ಹುಬ್ಬಳ್ಳಿ 'ಹಲಸಿನ ಹಬ್ಬ'; ಎರಡು ದಿನಗಳಲ್ಲಿ 8 ಲಕ್ಷ ರೂಪಾಯಿ ವಹಿವಾಟು.

<><><>

ಈಗ ವಾರ್ತೆಗಳ ವಿವರ

<><><>

ಹರ್ಷ

ಮಹಾದಾಯಿ ತಂಡ

ಕಳಸಾ–ಬಂಡೂರಿ ತಿರುವು ಯೋಜನೆ ಪರಿಶೀಲಿಸಲು, ಕೇಂದ್ರ ಸರ್ಕಾರ ರಚಿಸಿದ, 'ಪ್ರವಾಹ್' (Progressive River Authority For Water and Harmony) ತಂಡ, ಇಂದು ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ ನೀಡುತ್ತಿದೆ.

ಈ ಯೋಜನೆ ಅನುಷ್ಠಾನಗೊಳಿಸಲು, ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ಏಳು ಗ್ರಾಮಗಳ ಅರಣ್ಯ ಭೂಮಿ ಬಳಸಿಕೊಂಡು, ಜಾಕ್‌ವೆಲ್ ನಿರ್ಮಾಣ, ಪಂಪ್‌ಹೌಸ್, ಪೈಪ್‌ಲೈನ್ ಅಳವಡಿಸಲು, ಒಪ್ಪಿಗೆ ನೀಡುವಂತೆ ಕೋರಿ, ರಾಜ್ಯ ಸರ್ಕಾರ ಕೇಂದ್ರ ಪರಿಸರ ಸಚಿವಾಲಯಕ್ಕೆ ಈ ವರ್ಷದ ಜನವರಿಯಲ್ಲಿ ಪ್ರಸ್ತಾವ ಸಲ್ಲಿಸಿತ್ತು.

ಮಹಾದಾಯಿ ನ್ಯಾಯ ಮಂಡಳಿ, ಕಳೆದ 2018ರ ಆಗಸ್ಟ್ 14 ರಂದು 3 ದಶಾಂಶ 9–0 ಟಿ.ಎಂ.ಸಿ. ಅಡಿ ನೀರಿನ ಹಂಚಿಕೆ ಮಾಡಿತ್ತು. ಈ ಯೋಜನೆ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ, ಕೇಂದ್ರ ಜಲ ಆಯೋಗ, ಕಳೆದ 2022ರ ಡಿಸೆಂಬರ್ 29 ರಂದು ಅನುಮೋದನೆ ನೀಡಿತ್ತು. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ, 1 ದಶಾಂಶ 7–8 ಟಿ.ಎಂ.ಸಿ. ಅಡಿ ನೀರು ಮೀಸಲಿಡಲಾಗಿದೆ.

ಸಂಪೂರ್ಣತಾ/ಅಭಿಯಾನ

ಸುಸ್ಥಿರ ಅಭಿವೃದ್ಧಿಯ 6 ಪ್ರಮುಖ ಮಾನದಂಡಗಳನ್ನು ಸಾಧಿಸಲು, ಕೇಂದ್ರದ ನೀತಿ ಆಯೋಗ, ಸೆಪ್ಟೆಂಬರ್ 30ರ ವರೆಗೆ, 90 ದಿನಗಳ 'ಸಂಪೂರ್ಣತಾ ಅಭಿಯಾನ'ವನ್ನು, ರಾಜ್ಯದ 7 ಆಶೋತ್ತರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದೆ.

ರಾಯಚೂರು ಜಿಲ್ಲೆಯ ಮಸ್ಕಿ ಹಾಗೂ ಸಿರಿವಾರ ತಾಲೂಕುಗಳನ್ನು ಸುಸ್ಥಿರ ಅಭಿವೃದ್ಧಿಯ ಆಶೋತ್ತರ ವಲಯಗಳಲ್ಲಿ ಆಯ್ಕೆ ಮಾಡಲಾಗಿದೆ.

<><><>

ರಾಜ್ಯದ ಒಟ್ಟು 7 ಜಿಲ್ಲೆಗಳು ಹಾಗೂ 14 ತಾಲೂಕುಗಳನ್ನು ಒಳಗೊಂಡಂತೆ, ದೇಶದ ಒಟ್ಟು 112 ಆಶೋತ್ತರ ಜಿಲ್ಲೆಗಳು ಮತ್ತು 500 ಆಶೋತ್ತರ ವಲಯಗಳಲ್ಲಿ, ಸುಸ್ಥಿರ ಅಭಿವೃದ್ಧಿಯ 6 ಮಾನದಂಡಗಳನ್ನು ಸಾಧಿಸುವ ಗುರಿ, 'ಸಂಪೂರ್ಣತಾ ಅಭಿಯಾನ' ಹೊಂದಿದೆ.

ಗರ್ಭಿಣಿಯರ ಆರೈಕೆಗೆ ನೋಂದಣಿ, ತಾಯಂದಿರಿಗೆ ಪೂರಕ ಪೌಷ್ಟಿಕ ಆಹಾರ ಒದಗಿಸುವುದು, ಮಧುಮೇಹ, ಅಧಿಕ ರಕ್ತದೊತ್ತಡ ಹೊಂದಿರುವ ವ್ಯಕ್ತಿಗಳ ಆರೋಗ್ಯ ಪರೀಕ್ಷೆ, ಮಣ್ಣಿನ ಆರೋಗ್ಯ ಕಾರ್ಡ್‌ಗಳ ವಿತರಣೆ ಹಾಗೂ ಸ್ವ-ಸಹಾಯ ಗುಂಪುಗಳಿಗೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮಗಳನ್ನು, ಕಾಲಮಿತಿಯಲ್ಲಿ ಅನು ್ಠಾನಗೊಳಿಸಿ, ಪರಿಣಾಮ ವಿಶ್ಲೇಷಿಸಲು ಯೋಜಿಸಲಾಗಿದೆ.

ಹೆಣ್ಣು/ಭ್ರೂಣ

ಗರ್ಭಪೂರ್ವ ಮತ್ತು ಪ್ರಸವಪೂರ್ವ ಲಿಂಗ ಪತ್ತೆ ತಂತ್ರ ವಿಧಾನಗಳು ಹಾಗೂ ಲಿಂಗ ಆಯ್ಕೆ ನಿ ೇಧ ಕಾಯ್ದೆ 19194ರ ಅನುಸಾರ, ಭ್ರೂಣ ಲಿಂಗ ಪತ್ತೆ ಬಗ್ಗೆ ಮಾಹಿತಿ ನೀಡಿದವರಿಗೆ, 1 ಲಕ್ಷ ರೂಪಾಯಿ ಬಹುಮಾನ ನಿಗದಿಯಾಗಿದೆ.

ಚಿತ್ರದುರ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾಕ್ಟರ್ ಜಿ.ಪಿ.ರೇಣುಪ್ರಸಾದ್ ಮಾಹಿತಿ ನೀಡಿ, ಹೆಣ್ಣು ಭ್ರೂಣ ಹತ್ಯೆ ಕುರಿತು ಮಾಹಿತಿ ನೀಡಿ, ಯಶಸ್ವಿಗೊಂಡ ಗುಪ್ತ ಕಾರ್ಯಾಚರಣೆಯ ಮಾಹಿತಿದಾರರಿಗೆ, ಬಹುಮಾನವಾಗಿ 1 ಲಕ್ಷ ರೂಪಾಯಿ ನೀಡಲಾಗುವುದು. ಮಾಹಿತಿದಾರರ ವಿವರಗಳನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದರು.

ಆಸ್ತಿತೆರಿಗೆ/ವಿನಾಯಿತಿ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಪ್ರಸಕ್ತ ಸಾಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು, ಈ ತಿಂಗಳ ಅಂತ್ಯದ ವರೆಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿದಲ್ಲಿ, ಶೇಕಡ 5 ರ ್ಟ ವಿನಾಯಿತಿ ಸಿಗಲಿದೆ ಎಂದು, ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಮನವಿಯಂತೆ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಎಲ್. ರಘುನಾಥ್ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ, ಈ ಕುರಿತು ಪತ್ರ ಬರೆದಿದ್ದರು.

ಮಳೆ/ಮುನ್ಸೂಚನೆ

ರಾಜ್ಯದ ಕರಾವಳಿ ಭಾಗದಲ್ಲಿ, ಮುಂದಿನ ಐದು ದಿನಗಳ ಕಾಲ, ಮುಸುಲಾಧಾರ ಮಳೆ ಸಾಧ್ಯತೆ ಹಿನ್ನೆಲೆ, ಸಾರ್ವಜನಿಕರು ಹಾಗೂ ಮೀನುಗಾರರು ಮುಂಜಾಗ್ರತೆ ವಹಿಸುವಂತೆ, ಉತ್ತರಕನ್ನಡ ಜಿಲ್ಲೆಯ, ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷೆ ಪ್ರಿಯಾಲಕ್ಷ್ಮಿ ಮನವಿ ಮಾಡಿದ್ದಾರೆ.

ಪ್ರಕೃತಿ ವಿಕೋಪ ಉಸ್ತುವಾರಿ ಕೇಂದ್ರ ಹಾಗೂ ಹವಾಮಾನ ಇಲಾಖೆ, ಮುನ್ಸೂಚನೆಯಂತೆ, ಸಮುದ್ರದಲ್ಲಿ 55 ರಿಂದ 65 ಕಿಲೋ ಮೀಟರ್ ವೇಗದಲ್ಲಿ, ಬಿರುಗಾಳಿ ಬೀಸುವ ಸಾಧ್ಯತೆ ಇದೆ.

ಈ ತಿಂಗಳ 10ನೇ ತಾರೀಖಿನ ವರೆಗೆ, ಮೀನುಗಾರರು ಮೀನುಗಾರಿಕೆಗೆ ತೆರಳದಂತೆ, ಪ್ರವಾಸಿಗರು ನದಿ ತೀರಕ್ಕೆ ತೆರಳದಂತೆ ಎಚ್ಚರ ವಹಿಸಬೇಕು. ತುರ್ತು ಸಂದರ್ಭದಲ್ಲಿ ಉಚಿತ ಸಹಾವಾಣಿ ಸಂಖ್ಯೆ 1077 ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಕೋರಿದ್ದಾರೆ.

ಕವಿವಿ/ಪ.ವಿ. 40

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ, ಸ್ನಾತಕೋತ್ತರ ಅಧ್ಯಯನ ವಿಭಾಗ, ತನ್ನ 40ನೇ ವರ್ಷದ ಸಂಸ್ಥಾಪನಾ ಸಂಭ್ರಮಾಚರಣೆ ಪ್ರಯುಕ್ತ, ಇಂದು ಮತ್ತು ನಾಳೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಸಭಾಭವನದಲ್ಲಿ ರಾಷ್ಟ್ರೀಯ ಸಮ್ಮೇಳನ, ಮಾಧ್ಯಮ ಹಬ್ಬ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಪತ್ರಿಕೋದ್ಯಮ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ ಸಮಾರಂಭವನ್ನು ಆಯೋಜಿಸಿದೆ.

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್, ಇಂದು ಬೆಳಗ್ಗೆ 10.30ಕ್ಕೆ ರಾಷ್ಟ್ರೀಯ ಸಮ್ಮೇಳನ ಮತ್ತು ಮಾಧ್ಯಮ ಹಬ್ಬವನ್ನು ಉದ್ಘಾಟಿಸುವರು. ಹಿರಿಯ ಪತ್ರಕರ್ತ ರವಿ ಹೆಗಡೆ ದಿಕ್ಸೂಚಿ ಭಾಷಣ ಮಾಡುವರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊಫೆಸರ್ ಎ.ಎಸ್.ಬಾಲಸುಬ್ರಮಣ್ಯ ಅವರ ಕೃತಿ 'ಪತ್ರಿಕೋದ್ಯಮದ ಪಲ್ಲಟಗಳು' ಹಾಗೂ ವಿಭಾಗದ ಹಿರಿಯ ವಿದ್ಯಾರ್ಥಿಗಳ ಲೇಖನಗಳ ಸಂಗ್ರಹ 'ಮಾಧ್ಯಮ ಕ್ಷಿತಿಜ' ಗ್ರಂಥಗಳನ್ನು, ಗಣ್ಯರು ಬಿಡುಗಡೆ ಗೊಳಿಸಲಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊಫೆಸರ್ ಕೆ.ಬಿ.ಗುಡಸಿ, ಅಧ್ಯಕ್ಷತೆ ವಹಿಸುವರು.

ಹರ್ಷ/ಉಮೇಶ/ಡಾ.ಜೆ.ಎಂ.ಚಂ.

ಪ್ರಲ್ಹಾದ್/ಸ್ಮಾರ್ಟ್ ಸಿಟಿ

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಕೇಂದ್ರ ಪುರಸ್ಕೃತ, ಸಕ್ಷಮ ನಗರಿ –ಸ್ಮಾರ್ಟ್ ಸಿಟಿ ಯೋಜನೆ ಅಡಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ, ಚಿಟಗುಪ್ಪಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆಯಲ್ಲಿ ನೂತನವಾಗಿ ನಿರ್ಮಿಸಿದ, ನವಜಾತ ಶಿಶುಗಳ ಆರೈಕೆಯ ತೀವ್ರ ನಿಗಾ ಘಟಕವನ್ನು ಉದ್ಘಾಟಿಸಿ, ಸಚಿವರು ಮಾತನಾಡಿದರು,

ಹುಬ್ಬಳ್ಳಿಯ ಇನ್ನರ್ ವೀಲ್ ಕ್ಲಬ್, ಸಾಮಾಜಿಕೋದ್ಯಮಿ ಜಿತೇಂದ್ರ ಮಜೇಥಿಯಾ ಫೌಂಡೇಶನ್ ವತಿಯಿಂದ, ಫಿಜಿಯೋಥೆರಪಿ ಘಟಕ ನಿರ್ಮಾಣಗೊಂಡಿದೆ. ಉತ್ತರ ಕರ್ನಾಟಕದಲ್ಲಿಯೇ ಅತ್ಯುತ್ತಮ ಆಸ್ಪತ್ರೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿರುವ ಚಿಟಗುಪ್ಪಿ ಸರ್ಕಾರಿ ಆಸ್ಪತ್ರೆ, ಬಡ ಆರೋಗ್ಯಾಕಾಂಕ್ಷಿಗಳ ಪಾಲಿಗೆ ಸಂಜೀವಿನಿಯಾಗಿದೆ ಎಂದರು.

ಕೃಷ್ಣ/ಪ್ರವಾಹ

ವಿಜಯಪುರ ಜಿಲ್ಲೆಯ ಜೀವನಾಡಿ ಕೃಷ್ಣ ನದಿಯ ಉಗಮ ಸ್ಥಾನ, ಮಹಾರಾಷ್ಟ್ರದ ಮಹಾಬಲೇಶ್ವರ.

ನದಿಯ ಉಗಮ ಸ್ಥಾನ ಹಾಗೂ ಮಹಾರಾಷ್ಟ್ರದ ಪಶ್ಚಿಮಘಟ್ಟದಲ್ಲಿ ಸುರಿಯುತ್ತಿರುವ, ಸತತ ಮಳೆಯಿಂದಾಗಿ, ವಿಜಯಪುರ ಜಿಲ್ಲೆಯ ನಿಡಗುಂದಿ ತಾಲೂಕಿನ, ಆಲಮಟ್ಟಿಯ ಶ್ರೀ ಲಾಲ ಬಹಾದ್ದೂರ್ ಶಾಸ್ತ್ರಿ ಜಲ ಸಂಗ್ರಹಾಗಾರಕ್ಕೆ, ಒಳ ಹರಿವಿನ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾಗಿದೆ.

ಭಾನುವಾರ ಜಲಾಶಯದಲ್ಲಿ 60 ಟಿ.ಎಂ.ಸಿ. ಗಳಷ್ಟು, 515 ಮೀಟರ್ ವರೆಗೆ ನೀರು ಸಂಗ್ರಹವಾಗಿದೆ.

59 ಸಾವಿರದ 306 ಕ್ಯೂಸೆಕ್ ನೀರಿನ ಒಳ ಹರಿವಿದ್ದು, 430 ಕ್ಯೂಸೆಕ್ ನೀರನ್ನು ಅಣೆಕಟ್ಟೆಯಿಂದ ಹೊರ ಬಿಡಲಾಗುತ್ತದೆ.

ಬೊಮ್ಮಾಯಿ/ಗೋಡಂಬಿ

ಗದಗ ಜಿಲ್ಲೆ, ಹುಲಕೋಟಿಯಲ್ಲಿ ಶ್ಯಾಮಾ ಪ್ರಸಾದ್ ಮುಖರ್ಜಿ, ರೂರಲ್–ಅರ್ಬನ್ ಮಿ ’ನ್ ಯೋಜನೆ ಅಡಿ, ಗೋಡಂಬಿ ಸಂಸ್ಕರಣಾ ಘಟಕ ಸ್ಥಾಪಿಸಲಾಗಿದೆ.

ಗದಗ–ಹಾವೇರಿ ಲೋಕಸಭಾ ಕ್ಷೇತ್ರದ ಸಂಸದ ಬಸವರಾಜ ಬೊಮ್ಮಾಯಿ, ಗೋಡಂಬಿ ಸಂಸ್ಕರಣಾ ಘಟಕ ಉದ್ಘಾಟಿಸಿದರು. ಗೋಡಂಬಿ ಬೆಳೆಗಾರರು, ಈ ಸಂಸ್ಕರಣಾ ಘಟಕದ ಪ್ರಯೋಜನ ಪಡೆಯುವಂತೆ, ಅವರು ಕೋರಿದರು.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ್ ಪಾಲ್ಗೊಂಡು, ಮಾತನಾಡಿ, ಸಹಕಾರಿ ಆಂದೋಲನ ಕೇಂದ್ರವಾದ ಹುಲಕೋಟಿಯಲ್ಲಿ, ಗೋಡಂಬಿ ಸಂಸ್ಕರಣಾ ಘಟಕದ ಸ್ಥಾಪನೆ, ಈ ಭಾಗದ ಗೋಡಂಬಿ ಬೆಳೆಗಾರರಿಗೆ ಸಮಯ, ಶ್ರಮ ಉಳಿತಾಯ ದೊಂದಿಗೆ, ಸಂಸ್ಕರಣೆಯ ಆರ್ಥಿಕ ಹೊರೆ ಇಳಿಸಲಿದೆ ಎಂದರು.

ಕಳಸಾ–ಬಂಡೂರಿ

ಕಳಸಾ–ಬಂಡೂರಿ ತಿರುವು ಯೋಜನೆ ಪರಿಶೀಲಿಸಲು, ಕೇಂದ್ರ ಸರ್ಕಾರ ರಚಿಸಿದ, 'ಪ್ರವಾಹ್' **(Progressive River Authority For Water and Harmony)** ತಂಡ, ಭಾನುವಾರ ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲಿಸಿತು.

ಗೋವಾದ ಪಿ.ಎಂ. ಸ್ಕಾಟ್ ನೇತೃತ್ವದ ಎಂಟು ಜನ ಸದಸ್ಯರ ತಂಡ, ಕಳಸಾ ಬಂಡೂರಿ ನಾಲಾ ಜಲಾನಯನ ಪ್ರದೇಶದ, ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ಕಣಕುಂಬಿ, ಸುರಲ್ ಅರಣ್ಯ ಪ್ರದೇಶ, ಚೋರ್ಲಾ ಘಾಟ್ ಮತ್ತು ಹರತಾಳ ನಾಲಾಗಳಿಗೆ ಭೇಟಿ ನೀಡಿ, ವಸ್ತುಸ್ಥಿತಿ ಅಧ್ಯಯನ ಕೈಗೊಂಡರು.

ಈ ತಂಡದೊಂದಿಗೆ, ರಾಜ್ಯ ನೀರಾವರಿ ನಿಗಮದ ಅಧಿಕಾರಿಗಳು, ಗೋವಾ ರಾಜ್ಯದ ನೀರಾವರಿ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ರಾಜ್ಯವನ್ನು ಪ್ರತಿನಿಧಿಸಿರುವ, ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮ್ಮಿನಬಾವಿ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ರಾಜೇಶ್ ಅಮ್ಮಿನಬಾವಿ ಧ್ವನಿ 50 ಸೆಕೆಂದುಗಳು

<><><>

ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹರಿಯುವ, ಮಹಾದಾಯಿ ನದಿಯ, ಉಪ ಹರಿವುಗಳಾದ, ಕಳಸಾ ಮತ್ತು ಬಂಡೂರಾ ನಾಲಾಗಳನ್ನು ಮಲಪ್ರಭಾ ನದಿ ಒಡಲಿಗೆ ತಿರುಗಿಸಿ, ಸವದತ್ತಿಯ ನವಿಲು ತೀರ್ಥ ಜಲಾಶಯದಿಂದ, ಬೆಳಗಾವಿ, ಧಾರವಾಡ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಗಳ, 13 ತಾಲೂಕುಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಇದಾಗಿದೆ.

1980 ರಲ್ಲಿ ರೂಪುಗೊಂಡ ಈ ಯೋಜನೆಗೆ, 40 ವರ್ಷಗಳಿಗೂ ಮಿಕ್ಕಿದ ವಿವಾದದ ನಂಟಿದೆ. ನ್ಯಾಯಾಲಯ ಈ ಸಮಸ್ಯೆಗೆ ತೆರೆ ಎಳೆದು, ಕರ್ನಾಟಕಕ್ಕೆ ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆ ಸೇರಿ, ಒಟ್ಟು 13 ದಶಾಂಶ 5 ಟಿ.ಎಂ.ಸಿ. ನೀರು ಪಡೆದುಕೊಳ್ಳಲು ಅನುಮತಿಸಿದೆ.

ಯೋಜನೆಯ ಕಾಮಗಾರಿ ಆರಂಭಿಸುವ ಮುನ್ನ, ಕೇಂದ್ರ ಪರಿಸರ ಸಚಿವಾಲಯ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರ ಮತ್ತು ವನ್ಯಜೀವಿ ಮಂಡಳಿ ಅನುಮತಿ ಪಡೆದುಕೊಳ್ಳಲು ಸೂಚಿಸಿದ ಹಿನ್ನೆಲೆ, ಸ್ಕಾಟ್ ನೇತೃತ್ವದ ಅಧ್ಯಯನ ತಂಡದ ಭೇಟಿ, ಮಹತ್ವದ್ದಾಗಿದೆ.

ಖರ್ಗೆ/ಡೆಂಘಿ

ರಾಜ್ಯದಲ್ಲಿ ಡೆಂಘಿ ಪ್ರಕರಣಗಳು ದಿನದಿಂದ ದಿನಕ್ಕೆ, ಹೆಚ್ಚುತ್ತಿರುವ ಹಿನ್ನೆಲೆ, ರಾಜ್ಯದ ಎಲ್ಲ ಗ್ರಾಮ ಪಂಚಾಯ್ತಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ, ಸಚಿವರ ಸೂಚನೆ ನೀಡಿದ್ದು, ತೆರೆದ ತೊಟ್ಟಿಗಳು ಮತ್ತು ಸಾರ್ವಜನಿಕ ಶೌಚಾಲಯಗಳಲ್ಲಿ ನೀರು ಸಂಗ್ರಹಗೊಳ್ಳದಂತೆ, ಶುಚಿಗೊಳಿಸುವಂತೆ ತಿಳಿಸಿದ್ದಾರೆ.

ಅಂಗನವಾಡಿ, ಶಾಲಾ–ಕಾಲೇಜುಗಳು, ವಸತಿ ಶಾಲೆಗಳ ಮೇಲ್ಛಾವಣಿಗಳು ಮತ್ತು ಆವರಣಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಹಾಗೂ ಈಡಿಸ್ ಸೊಳ್ಳೆಗಳು ಉತ್ಪತ್ತಿಯಾಗದಂತೆ ಕ್ರಮವಹಿಸಬೇಕು ಎಂದು ನಿರ್ದೇಶಿಸಿದ್ದಾರೆ.

<><><>

ದಾವಣಗೆರೆ ಜಿಲ್ಲೆಯಲ್ಲಿ 173 ಡೆಂಘಿ ಪ್ರಕರಣಗಳು ದೃಢಪಟ್ಟಿದ್ದು, ಹತೋಟಿಗೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಷಣ್ಮುಖಪ್ಪ ತಿಳಿಸಿದ್ದಾರೆ.

<><><>

ಮೈಸೂರು ಜಿಲ್ಲೆಯಲ್ಲಿ 496 ಡೆಂಘಿ ಪ್ರಕರಣಗಳು ಪತ್ತೆಯಾಗಿವೆ. ಅವರೆಲ್ಲರಿಗೂ ಸೂಕ್ತ ಚಿಕಿತ್ಸೆ ನೀಡಲಾಗಿದ್ದು, ಸದ್ಯ 14 ಜನ ಡೆಂಘಿ ಜ್ವರದಿಂದ ಬಳಲುತ್ತಿದ್ದಾರೆ. ಅವರಿಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಹರ್ಷ/ಉಮೇಶ/ಸಚಿವರ ಎಕ್ಸ್ ಖಾತೆ/ಟಿಟಿಸಿ ದಾವಣಗೆರೆ/ಮೈಸೂರು

ಹಲಸಿನ ಹಬ್ಬ

ಬಾಯಿಗಿಟ್ಟರೆ ಜೇನು ಸವಿದಂತೆನಿಸುವ, ಹಲಸಿನದು ಅದ್ಭುತವಾದ ಲೋಕ. ಬರಗಾಲದಲ್ಲೂ ಫಲ ನೀಡುವ ಕಲ್ಪವೃಕ್ಷ, ಹಲಸು. ಔಷಧೀಯ ಗುಣಗಳಿಂದಾಗಿ ಮತ್ತೆ ಮರೆತು ಹೋದ ಈ ಹಣ್ಣು, ಈಗ ಪ್ರವರ್ಧಮಾನಕ್ಕೆ ಬರುತ್ತಿದೆ.

ಕೆಂಪು ತೊಳೆಯ ಶಂಕರ ಮತ್ತು ಸಿದ್ದು ಹಲಸು, ಶೀಘ್ರ ಫಲ ಕೊಡುವ ವಿಯೆಟ್ನಾಂ ಅರ್ಲಿ ಮತ್ತು ಮಲೇಷಿಯಾ ಹಲಸು ಸೇರಿದಂತೆ, ಅತ್ಯುತ್ತಮ ರುಚಿ ಮತ್ತು ಗಾತ್ರಕ್ಕೆ ಹೆಸರಾದ ಭೈರಚಂದ್ರ, ಲಾಲ್‌ಬಾಗ್ ಮಧುರ ಮತ್ತು ಸಣ್ಣ ಗಾತ್ರದ ರುದ್ರಾಕ್ಷಿ ಹಲಸು ನೋಡಲು ಸಹ ಬಲು ಚೆಂದ.

ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರ ಮಠದ, 'ಮೂಜಗಂ' ಸಭಾಭವನದಲ್ಲಿ, ಎರಡು ದಿನಗಳ ಕಾಲ ನಡೆದ, ಹುಬ್ಬಳ್ಳಿ ಹಲಸಿನ ಹಬ್ಬ, 8 ಲಕ್ಷ ರೂಪಾಯಿಗಳ ವಹಿವಾಟು ದಾಖಲಿಸಿದೆ.

ಸಾವಯವ ಮತ್ತು ಹಲಸಿನ ಹಬ್ಬದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರೈತ ಮಹಿಳೆ ಅಶ್ವಿನಿ ಚಂದ್ರಗೌಡ ಮರಿಗೌಡರ.

<><><>

ಅಶ್ವಿನಿ ಚಂದ್ರಗೌಡ ಮರಿಗೌಡರ ಧ್ವನಿ 45 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ, ಗದಗ ಜಿಲ್ಲೆಯ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರಿಗೆ ಶಿಬಿರ, ಇಂದಿನಿಂದ ಈ ತಿಂಗಳ 16ರ ವರೆಗೆ ಜರುಗಲಿದೆ.

ರಾಜ್ಯ ಮಾನವ ಹಕ್ಕುಗಳ ಆಯೋಗ, ನಾಳೆಯಿಂದ 11ನೇ ತಾರೀಖಿನ ವರೆಗೆ, ಗದಗ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಸಭೆ ನಡೆಸಲಿದೆ.

ಕರ್ನಾಟಕ ನಾಮಕರಣ ಸಂಭ್ರಮ 50ರ ಅಂಗವಾಗಿ, ಜ್ಯೋತಿ ರಥ ಯಾತ್ರೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ಮಾರ್ಗವಾಗಿ, ನಾಳೆ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಲಿದೆ.

ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದಿಂದ, ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 1 ಕೋಟಿ 1 ಲಕ್ಷ, 89 ಸಾವಿರದ 195 ರೂಪಾಯಿ ಮೊತ್ತದ ಚೆಕ್‌ನ್ನು, ನಿಗಮದ ಅಧ್ಯಕ್ಷ ಹಾಗೂ ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ ಹಸ್ತಾಂತರಿಸಿದರು.

ಹಾವೇರಿ ಜಿಲ್ಲೆಯಲ್ಲಿ ಅಡಿಕೆ, ಮಾವು, ಶುಂಠಿ, ಹಸಿ ಮೆಣಸಿನಕಾಯಿ ಬೆಳೆಗಳಿಗೆ ವಿಮೆ ಕಂತು ಕಟ್ಟಲು, ಈ ತಿಂಗಳ 31 ಕೊನೆಯ ದಿನವಾಗಿದೆ ಎಂದು, ತೋಟಗಾರಿಕೆ ಇಲಾಖೆ ಮಾಹಿತಿ ನೀಡಿದೆ.

ಭಾರತೀಯ ವಾಯುಪಡೆಯ, ಅಗ್ನಿಪಥ್ ಯೋಜನೆಯಡಿ, ಅಗ್ನಿವೀರ್ ವಾಯು ಸೇವೆಗಾಗಿ, ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಾಲತಾಣ – agnipath vayu.cdac.in ಭೇಟಿ ನೀಡಬಹುದು.

ಬೆಂಬಲ ಬೆಲೆ ಯೋಜನೆಯಡಿ, ಪ್ರತಿ ಕ್ವಿಂಟಾಲ್ ಕುಸುಬಿಗೆ 5 ಸಾವಿರದ 800 ರೂಪಾಯಿ ನಿಗದಿಪಡಿಸಲಾಗಿದೆ ಎಂದು, ಗದಗ ಜಿಲ್ಲಾಧಿಕಾರಿ ವೈಶಾಲಿ ತಿಳಿಸಿದ್ದಾರೆ.

ಹರ್ಷ/ಉಮೇಶ/ಕೆ.ವಾ.ಇ. ಜಿಲ್ಲಾವಾರು/ಜಿಲ್ಲಾವಾರು ಪಿಟಿಸಿಗಳು/ಎಚ್.ಆರ್.ಸುಧೀಂದ್ರ/ರಾಜಶ್ರೀ

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಕಳಸಾ–ಬಂಡೂರಿ ತಿರುವು ಯೋಜನೆ; ಕೇಂದ್ರದ 'ಪ್ರವಾಹ್' ತಂಡದಿಂದ, ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ, ಪರಿಶೀಲನೆ.
- ಡೆಂಘಿ ಪ್ರಕರಣ ಏರುಗತಿಯಲ್ಲಿ; ಎಲ್ಲ ಗ್ರಾಮ ಪಂಚಾಯ್ತಿಗಳು ಮುನ್ನೆಚ್ಚರಿಕೆ ವಹಿಸಬೇಕು – ಪ್ರಿಯಾಂಕ್ ಖರ್ಗೆ, ಕಟ್ಟುನಿಟ್ಟಿನ ಸೂಚನೆ.
- ಸಂಪೂರ್ಣತಾ ಅಭಿಯಾನ; ರಾಯಚೂರು ಜಿಲ್ಲೆಯ ಮಸ್ಕಿ ಹಾಗೂ ಸಿರಿವಾರ ತಾಲೂಕುಗಳು ಆಯ್ಕೆ.
- ಹುಬ್ಬಳ್ಳಿ 'ಹಲಸಿನ ಹಬ್ಬ'; ಎರಡು ದಿನಗಳಲ್ಲಿ 8 ಲಕ್ಷ ರೂಪಾಯಿ ವಹಿವಾಟು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>